## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 919 (1142) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಹೆಚ್. ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 16.12.2025 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಬೊಮ್ಮಸಂದ್ರ 4ನೇ ಹಂತದ ಮತ್ತು ಎಲೆಕ್ಟ್ರಾನಿಕ್ ಸಿಟಿ ಸಂಪರ್ಕ ರಸ್ತೆ ಅಧಿಸೂಚನೆ ಹೊರಡಿಸಿರುವ ಹುಲಿಮಂಗಲ ಮತ್ತು ತಿರುಪಾಳ್ಯ ಗ್ರಾಮಗಳಲ್ಲಿನ ಒಟ್ಟು 6-½ ಎಕರೆ ಜಮೀನನ್ನು ಭೂಸ್ವಾದೀನದಿಂದ ಕೈಬಿಡಲು ತೀರ್ಮಾನವನ್ನು ಬೋರ್ಡ್ ಮೀಟಿಂಗ್‌ನಲ್ಲಿ ಕ್ರಮ ಕೈಗೊಂಡಿದ್ದರೂ ಇದುವರೆಗೂ ಸರ್ಕಾರದ ಅಧಿಕೃತ ಆದೇಶ ಹೊರಡಿಸದಿರಲು ಕಾರಣವೇನು; (ವಿವರ ನೀಡುವುದು)</td><td rowspan="4">ಬೊಮ್ಮಸಂದ್ರ 4ನೇ ಹಂತ ಮತ್ತು ಎಲೆಕ್ಟ್ರಾನಿಕ್ ಸಿಟಿ 1ನೇ ಹಂತ ಸಂಪರ್ಕ ರಸ್ತೆ ಸಲುವಾಗಿ ದಿನಾಂಕ:19.07.2010ರಂದು ಹೊರಡಿಸಲಾಗಿರುವ ಪ್ರಾಥಮಿಕ ಅಧಿಸೂಚನೆ ಜಮೀನುಗಳ ಪೈಕಿ ಭೂಸ್ವಾಧೀನವಾಗಿರುವ ಹುಲಿಮಂಗಲ ಗ್ರಾಮದಲ್ಲಿನ 2 ಎಕರೆ 36 ½ ಗುಂಟೆ ಮತ್ತು ತಿರುಪಾಳ್ಯ ಗ್ರಾಮದಲ್ಲಿನ 6 ಗುಂಟೆ ಒಟ್ಟು 3 ಎಕರೆ 2½ ಗುಂಟೆ ಜಮೀನು ಹಾಗೂ ದಿನಾಂಕ:20.12.2010 ರ ಪ್ರಾಥಮಿಕ ಅಧಿಸೂಚನೆಯಲ್ಲಿ ಒಳಗೊಂಡಿರುವ ಹುಲಿಮಂಗಲ ಗ್ರಾಮದಲ್ಲಿನ 3 ಎಕರೆ 9 ಗುಂಟೆ ಜಮೀನು ಒಳಗೊಂಡಂತೆ ಒಟ್ಟು 6 ಎಕರೆ 11½ ಗುಂಟೆ ಜಮೀನುಗಳು ರಸ್ತೆ ಸಂಪರ್ಕ ಕಲ್ಪಿಸಲು ಅವಶ್ಯವಿಲ್ಲದ ಕಾರಣ ದಿನಾಂಕ:27.03.2023ರಂದು ಜರುಗಿದ 384ನೇ ಮಂಡಳಿ ಸಭೆಯ ನಿರ್ಣಯದಂತೆ ಸದರಿ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡುವ ಪ್ರಸ್ತಾವನೆಯು ಮಂಡಳಿಯಿಂದ ಸ್ವೀಕೃತವಾಗಿದ್ದು, ಸರ್ಕಾರದ ಹಂತದಲ್ಲಿ ಪರಿಶೀಲಿನೆಯಲ್ಲಿರುತ್ತದೆ.</td></tr>
<tr><td>ಆ)</td><td>ಇದನ್ನು ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದ್ದರೂ ಸಹ ಇದನ್ನು ಯಾವುದೇ ರೀತಿ ಕ್ರಮ ಕೈಗೊಳ್ಳದೇ ಇರಲು ಕಾರಣವೇನು;</td></tr>
<tr><td>ಇ)</td><td>ಪ್ರಾಥಮಿಕ ಅಧಿಸೂಚನೆ ಸರ್ಕಾರಕ್ಕೆ ಬಿಟ್ಟಿರುವ ಆದೇಶವಿದ್ದರೂ ಇನ್ನೂ ಸರ್ಕಾರ ಯಾವುದೇ, ಅಧಿಕೃತ ಆದೇಶ ಅಥವಾ ಗೆಜೆಟ್ ನೋಟಿಫಿಕೇಶನ್ ಹೊರಡಿಸದೇ ಇರಲು ಕಾರಣವೇನು;</td></tr>
<tr><td>ಈ)</td><td>ಇದನ್ನು ಯಾವ ಕಾಲಮಿತಿಯೊಳಗೆ ಗೆಜೆಟ್ ನೋಟೀಫಿಕೇಶನ್ ಹೊರಡಿಸಲಾಗುವುದು?</td></tr>
</table>

**ಸಂಖ್ಯೆ: ಸಿಐ 655 ಐಎಪಿ 2025**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು.